ಅಧ್ಯಕ್ಷರು:—ಳಿ ವರ್ಷಗಳಿಗೊಂದು ಸಾರಿ ಷೆಲ್‌ಕ್ಯೇಟಿಂಗ್ ಮಾಡಬೇಕಾಗುತ್ತದೆಂದು ಸರಿಯಾದ ಉತ್ತರ ಕೊಟ್ಟಿದ್ದಾರಲ್ಲ.

ಶ್ರೀ ಕೆ. ಶ್ರೀರಾಮುಲು:—ಉತ್ತರದಲ್ಲಿ ಕೊಟ್ಟಿರಲಿಲ್ಲ. ಇದು ಊಹೆ ಆಯಿತು.

ಅಧ್ಯಕ್ಷರು:—ಬೇರೆ ಪ್ರಶ್ನೆ ಕೇಳಿ, ವಾದ ಮಾಡುವುದರಲ್ಲಿ ಅರ್ಥವಿಲ್ಲ.

ಶ್ರೀ ಕೆ. ಶ್ರೀರಾಮುಲು:—ತಾವು ದಯವಿಟ್ಟು ಈ ಪ್ರಶ್ನೆಯನ್ನು ತಡೆಹಿಡಿದು, ಅರ್ಧ ಗಂಟೆಕಾಲ ಚರ್ಚೆಗೆ ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು:—ರೂಲ್ಸ್ ಪ್ರಕಾರ ಮಾನ್ಯ ಸದಸ್ಯರು ನೋಟೀಸ್ ಕಳುಹಿಸಿಕೊಡಬೇಕು.

RISE IN PRICES OF ESSENTIAL COMMODITIES

335 Sri JAYAPRAKASH SHETTY (Brahmavar).—

Will the Minister for Food and Forests be pleased to state:—

(*a*) whether the Government is aware of the manmade scarcity of essential commodities in the State resulting in abnormal rise in price level;

(*b*) if so, the steps taken to enable the consumers to get enough essential commodities at a fair price.

(*c*) the steps that are being taken to book the persons responsible for creating the situation?

Sri K. H. PATIL (Minister for Food and Forests).—

(*a*) and (*b*) Foodgrains like Rice, Wheat, Ragi and Jowar as well as Sugar are being released to consumers through Fair Price Shops at reasonable prices. Kerosene is being supplied on ration cards. Tyres are being distributed on permits under a control order brought in force by State Government in the interest of small truck-owners. Frequent contact is being maintained with baby-food manufacturing companies in order to prevent black marketing of baby-foods and their diversion to bogus customers.

(*c*) Deterrent action is being taken against hoarders, black-marketeers and other offenders under the relevant provisions of laws in force. The executive intelligence staff of the Department as well as the Food Cell attached to the Police Department are maintaining vigi ance against malpractices which cause scarcity.

ಶ್ರೀ ಜಯಪ್ರಕಾಶ ಶೆಟ್ಟಿ:—ಸ್ವಾಮಿ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಕ್ಕಿಯ ದರ ರೂ. ೨–೪೦ ರಿಂದ ರೂ. ೨–೬೦ ಕ್ಕೆ ಏರಿದೆ. ಇಷ್ಟು ದರ ಯಾವ ವರ್ಷವೂ ಇರಲಿಲ್ಲ. ಈ ರೀತಿ ಧರ ಏರುವುದಕ್ಕೆ ಕಾರಣ ಏನು ?

ಶ್ರೀ ಕೆ. ಎಚ್. ಪಾಟೀಲ:—ಇದಕ್ಕೆ ಲಾಭ ಬಡುಕತನವೇ ಕಾರಣ.

ಶ್ರೀ ಜಯಪ್ರಕಾಶ ಶೆಟ್ಟಿ:— ಹಾಗಾದರೆ ಈ ಏರುಪೇರು ಇರುವ ಧಾರಣೆಯನ್ನು ನಿಲ್ಲಿಸುವುದಕ್ಕೆ ಮುಂದೆ ಯಾವ ಕಾರ್ಯಕ್ರಮವನ್ನು ಕೈಗೊಳ್ಳುತ್ತೀರಿ ?

ಶ್ರೀ ಕೆ. ಎಚ್. ಪಾಟೀಲ:—ಮಾನ್ಯ ಸದಸ್ಯರಿಗೆ ಗೊತ್ತಿದೆ. ಈಗಾಗಲೇ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇನ್‌ಫಾರ್ಮಲ್ ರೇಷನಿಂಗ ತರಬೇಕು ಎಂದು ಪ್ರಾರಂಭಮಾಡಿದ್ದೇವೆ. ಅಲ್ಲದೆ ಈಗಾಗಲೇ ಮಾನ್ಯ ಸದಸ್ಯರೊಂದಿಗೆ ಚರ್ಚೆಮಾಡಿ ಅಲ್ಲಿರುವ ಸಹಕಾರ ಸಂಘಗಳು ಬೇರೆ ಜಿಲ್ಲೆಗಳಿಂದ ಅಕ್ಕಿಯನ್ನು ತೆಗೆದುಕೊಂಡು ಹೋಗುವುದಕ್ಕೆ ಪರ್ಮಿಟ್ ಕೊಡಲಾಗಿದೆ. ಮತ್ತು ಮಂಗಳೂರಿಗೆ ಅಕ್ಕಿಯನ್ನು ತೆಗೆದುಕೊಂಡು ಹೋಗುವುದಕ್ಕೆ ಎರಡನೇಯವರೂ ಸಹ ಕೇಳ್ಕುತ್ತಿದ್ದಾರೆ. ಆದರೆ ಮಾನ್ಯ ಸದಸ್ಯರ ಅಭಿಪ್ರಾಯವನ್ನು ಅನುಮೋದಿಸಿ ಅಲ್ಲಿಗೆ ಖಾಸಗಿಯವರಿಗೆ ಕೊಡಬೇಡಿ ಸಹಕಾರ ಸಂಘಗಳಿಗೆ ಕೊಡಿ ಎಂದು ಹೇಳಿದ್ದೇವೆ. ಇದರಿಂದ ಖಾಸಗಿಯವರಿಗೆ ಪರ್ಮಿಟ್ ಕೊಡುವುದನ್ನು ನಿಷೇಧಿಸಲಾಗಿದೆ.

ಶ್ರೀ ಎ. ಜಿ. ಕೊಡಗಿ :—ರಾಜ್ಯದಲ್ಲಿ ನ್ಯಾಯ ಬೆಲೆಗಳಲ್ಲಿ ಅಕ್ಕಿ, ಗೋದಿ, ರಾಗಿ, ಜೋಳ ಹಾಗೂ ಸಕ್ಕರೆಗಳಂತಹ ಆಹಾರ ಧಾನ್ಯಗಳನ್ನು ಬಳಕೆದಾರರಿಗೆ ನ್ಯಾಯ ಬೆಲೆ ಅಂಗಡಿಗಳ ಮೂಲಕ ಬಿಡುಗಡೆ ಮಾಡಲಾಗಿದೆ ಎಂದು ಹೇಳಿದ್ದೀರಿ. ಆದರೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಕ್ಕಿ ದರ ಏರಿದೆಯೇ ಹೊರತು ಇಳಿದಿಲ್ಲ. ಅದಕ್ಕೆ ತಾವು ಏನು ಹೇಳುತ್ತೀರಿ ?

ಶ್ರೀ ಕೆ. ಎಚ್. ಪಾಟೀಲ:—ಅದು ತಮ್ಮ ಅಭಿಪ್ರಾಯ. ಆ ಬಗ್ಗೆ ಸರ್ಕಾರಕ್ಕೇನೂ ವರದಿ ಬಂದಿಲ್ಲ.

ಶ್ರೀ ಬಿ. ವಿ. ಕಕ್ಕಿಲಾಯ:—ಸಹಕಾರ ಸಂಘಗಳಿಗೆ ಅಕ್ಕಿ ಒಯ್ಯುವುದಕ್ಕೆ ತಾವು ಯಾವಾಗ ಪರ್ಮಿಟ್ ಕೊಟ್ಟೀರಿ ? ಇದರ ಬಗ್ಗೆ ಏನಾದರೂ ಮಾಹಿತಿ ಇದೆಯೇ ?

ಶ್ರೀ ಕೆ. ಎಚ್. ಪಾಟೀಲ:—ಈಗಾಗಲೇ ತಾಲ್ಲೂಕಿಗೆ ಒಂದೊಂದು ಸಹಕಾರ ಸಂಘಗಳನ್ನು ಆಯ್ಕೆ ಮಾಡಿ ಅವರಿಗೆ ಪರ್ಮಿಟ್ ಕೊಡಲಿ ಎಂದು ಡೆಪ್ಯುಟಿ ಕಮೀಷನರಿಗೆ ತಿಳಿಸಿದ್ದೇವೆ. ಎಷ್ಟು ಸಹಕಾರ ಸಂಘಗಳು ಅಕ್ಕಿಯನ್ನು ಒಯ್ದಿದ್ದಾರೆ ಎನ್ನುವುದು ನನ್ನ ಗಮನಕ್ಕೆ ಬಂದಿಲ್ಲ. ಈವೊತ್ತಿನ ದಿವಸ ಉಡುಪಿ ಯವರು ಒಬ್ಬರು ಬಂದಿದ್ದರು. ಅವರಿಗೆ ಆರ್ಡರ್ ಕಾಪಿ ಕೊಟ್ಟೆ. ಅವರು ಒಯ್ಯುತ್ತಾರೆಂದು ನಾನು ಆಶಿಸುತ್ತೇನೆ.

ಶ್ರೀ ಎ. ಜಿ. ಕೊಡಗಿ :—ತಾವು ತಪ್ಪಿತಸ್ಥರ ವಿರುದ್ಧ ಉಗ್ರಕ್ರಮಗಳನ್ನು ಕೈಕೊಳ್ಳಲಾಗುತ್ತಿದೆ ಎಂದು ಹೇಳಿದ್ದೀರಿ. ಹಾಗಿದ್ದರೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಷ್ಟು ಜನರ ಮೇಲೆ ಯಾವ ಯಾವ ಕ್ರಮ ಕೈಗೊಂಡಿದ್ದೀರಿ ಎನ್ನುವುದನ್ನು ಹೇಳುತ್ತೀರಾ ?

ಶ್ರೀ ಕೆ. ಎಚ್. ಪಾಟೀಲ:—ತಪ್ಪಿತಸ್ಥರು ಯಾರು ಯಾರು ಇದ್ದಾರೆ ಅವರ ಮೇಲೆಲ್ಲ ಕ್ರಮ ತೆಗೆದು ಕೊಳ್ಳುತ್ತೇವೆ.

ಶ್ರೀ ಎಂ. ಮಲ್ಲಪ್ಪ:—ಲಾಭದ ದೃಷ್ಟಿಯಿಂದ ಮಾರಾಟ ಮಾಡುತ್ತಿರುವುದರಿಂದ ಬೆಲೆ ಏರಿದೆ ಎನ್ನುವ ಅಭಿಪ್ರಾಯ ಕೊಟ್ಟಿದ್ದೀರಿ. ಈಗ ಭತ್ತ ಮತ್ತು ಅಕ್ಕಿ ಉಳಿದು ಬಾಕಿ ಪದಾರ್ಥಗಳಿಗೆ ನಿರ್ಬಂಧವನ್ನು ತೆಗೆದು ಹಾಕಿದ ಮೇಲೆ ಬೆಲೆಗಳು ಕಡಿಮೆಯಾಗಿದೆ ಎಂದು ಹೇಳುತ್ತೀರಿ. ಆದೇ ರೀತಿ ಅಕ್ಕಿ ಮತ್ತು ಭತ್ತದ ಬೆಲೆ ಇರುವ ನಿರ್ಬಂಧವನ್ನೂ ಕೂಡ ತೆಗೆದು ಹಾಕಿದರೆ ಬೆಲೆ ಕಡಿಮೆಯಾಗುತ್ತದೆ ಎಂದು ಮನವರಿಕೆಯಾಗು ವುದಿಲ್ಲವೇ ?

ಶ್ರೀ ಕೆ. ಎಚ್. ಪಾಟೀಲ:—ಈ ಬಗ್ಗೆ ಸಾಕಷ್ಟು ಮನವರಿಕೆಯಾಗಿದ್ದರೂ ಕೂಡ ವಸ್ತುಸ್ಥಿತಿಯನ್ನು ಗಮನಿಸಿ ಮತ್ತು ಜನರ ಹಿತಾಸಕ್ತಿಗಳನ್ನು ಗಮನಿಸಿದರೆ ಸರ್ಕಾರ ಇನ್ನೂ ಕೆಲವು ಕಾಲ ಈ ಬಗ್ಗೆ ಜವಾಬ್ದಾರಿ ನಿರ್ವಹಿಸಬೇಕಾಗಿರುವುದರಿಂದ ಈಗ ಆ ನಿರ್ಬಂಧವನ್ನು ತೆಗೆದು ಹಾಕದಿರುವುದು ಅನಿವಾರ್ಯ.

ಶ್ರೀ ಟಿ. ಎಂ. ಮಂಜುನಾಥ:—ಸ್ವಾಮಿ ತಾವು ಅಪ್ಪಣೆ ಕೊಡಿಸಿದಿರಿ. ಸಹಕಾರ ಸಂಘಗಳು ಈ ಆಹಾರ ಧಾನ್ಯವನ್ನು ಜಿಲ್ಲೆಯಿಂದ ಜಿಲ್ಲೆಗೆ ತೆಗೆದುಕೊಂಡು ಹೋಗುವುದಕ್ಕೆ ಅಪ್ಪಣೆ ಕೊಟ್ಟಿದ್ದಾರೆ ಎಂದು. ಬಹುಶಃ ಇದರಲ್ಲಿ ಅರ್ಧಭಾಗ ತಾವು ಒಪ್ಪಿಕೊಂಡ ಹಾಗಾಯಿತು. ಮತ್ತು ತಾವು ಈಗತಾನೇ ಹೇಳಿದಿರಿ ಲಾಭ ಬಡುಕರು ಇರುವುದರಿಂದ ಬೆಲೆ ಏರಿರುವುದಕ್ಕೆ ಕಾರಣ ಎಂದು. ಆದುದರಿಂದ ನಾನು ತಮ್ಮನ್ನು ಕೇಳುವುದು ಏನೆಂದರೆ ಇಂಥ ಅಕ್ಕಿಗೆ ಇಂಥ ರೇಟು ಎಂದು ನಿಗದಿ ಮಾಡಿ ಆ ರೇಟಿಗೆ ಮಾರಬೇಕು ಎಂದು ತಾವು ಏನಾದರೂ ಒಂದು ಸೂಚನೆ ಕಳುಹಿಸಿದ್ದೀರಾ ?

ಶ್ರೀ ಕೆ. ಎಚ್. ಪಾಟೀಲ:—ರೇಟನ್ನು ನಿಗದಿ ಮಾಡುವುದಕ್ಕಾಗುವುದಿಲ್ಲ. ರೇಟನ್ನು ಒಂದು ವೇಳೆ ನಿಗದಿ ಮಾಡಿದರೆ ಅದು ಪೇಟೆಗೆ ಹೋಗಿ ದರ ಜಾಸ್ತಿಯಾಗುತ್ತದೆ. ಆದುದರಿಂದ ನೈತಿಕವಾಗಿ ಅಕ್ಕಿಯನ್ನು ಕೆ. ಜಿ. ಒಂದಕ್ಕೆ ೨ ರೂಪಾಯಿಗಿಂತ ಕಡಿಮೆ ಬೆಲೆಯಲ್ಲಿ ಮಾರಾಟ ಮಾಡಬೇಕು ಎಂದು ಪ್ರಾರ್ಥನೆ ಮಾಡಿದ್ದೇನೆ. ಅವರು ಆ ರೀತಿ ಮಾರದೇ ಇದ್ದರೆ ಎಲ್ಲೆಲ್ಲಿ ಸಾಧ್ಯ ಇದೆ ಅಲ್ಲಿ ಸರ್ಕಾರ ತನ್ನ ದರ ಕಡಿಮೆ ಮಾಡಲಿಕ್ಕೆ ಪ್ರಯತ್ನ ಮಾಡುತ್ತದೆ.

ಶ್ರೀ ಬಿ. ವಿ. ಕಕ್ಕಿಲಾಯ:—ಸ್ವಾಮಿ, ಚಿಮಿನಿ ಎಣ್ಣೆಯನ್ನು ತಾವು ಕಾರ್ಡ ಮೂಲಕ ವಿತರಣೆ ಮಾಡುತ್ತಿದ್ದಾರೆ ಎಂದು ಹೇಳಿದಿರಿ. ಅದನ್ನು ಯಾವ ಷಾಪ ಮೂಲಕ ಕೊಡುತ್ತಾರೆ ? ಮತ್ತು ರೇಷನ್ ಷಾಪ ಇಲ್ಲದೇ ಇರುವ ಕಡೆ ಬೇರೆಯವರ ಮೂಲಕ ವಿತರಣೆ ಮಾಡ್ಸುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಕೆ. ಎಚ್. ಪಾಟೀಲ:—ಅದನ್ನು ಯಾವ ರೀತಿ ವಿತರಣೆ ಮಾಡುತ್ತಿದ್ದಾರೆ ಎಂದರೆ ಇನ್‌ಫಾರ್ಮಲ್ ರೇಷನ್ ಇರುವ ಕಡೆ ಕಾರ್ಡ ಮೇಲೆ ಕೊಡುತ್ತಾರೆ. ಈ ಬಗ್ಗೆ ಇನ್ನೂ ನಿರ್ದಿಷ್ಟ ಕ್ರಮ ತೆಗೆದುಕೊಂಡಿಲ್ಲ. ಈವ್ಹೊತ್ತು ಅಥವಾ ನಾಳೆ ಒಂದು ನಿರ್ದಿಷ್ಟವಾದ ಕ್ರಮ ತೆಗೆದುಕೊಳ್ಳಬೇಕು ಎಂದು ಆಲೋಚನೆ ಮಾಡಿದ್ದೇವೆ. ಈಗ ಸಾಕಾದಷ್ಟು ಸೀಮೆಯೆಣ್ಣೆ ಇದೆ. ಕೇಂದ್ರ ಸರ್ಕಾರದವರು ಮೊದಲು ೧೨ ಸಾವಿರ ಟನ್ ಆಷ್ಟು ನಮಗೆ ಸಪ್ಲೈ ಮಾಡುತ್ತಿದ್ದರು. ಆನಂತರ ಅದನ್ನು ೭೫೦೦ ಟನ್‌ಗೆ ಇಳಿಸಿ ಮತ್ತೆ ೯ ಸಾವಿರ ಟನ್‌ಗೆ ಏರಿಸಿದರು. ಈಗ ಮತ್ತೆ ೧೨ ಸಾವಿರ ಟನ್ ಕೊಡಲು ಒಪ್ಪಿದ್ದಾರೆ. ಅವರಿಂದ ಕನಫರ್ಮೇಷನ್ ನಿರೀಕ್ಷಣೆ ಮಾಡಿದ್ದೇವೆ. ಸಾಕಷ್ಟು ಸಿಕ್ಕುತ್ತದೆ ಎನ್ನುವ ನಂಬಿಕೆ ಇದೆ.

Sri H. LINGAREDDY :—

Last year there was 52 million tonnes of food production and this year it is about 66 million tonnes, this being so, why there should be control of foodgrains in our State ?

Sri K. H. PATIL :—

Because it is a policy question, therefore, it has been controlled.

RURAL COMMUNICATION ROADS IN BUNTWAL TALUK

352. Sri B. V. KAKKILAYA (Buntwal).—

Will the Minister for Public Works and Electricity be pleased to state :—

(*a*) the Rural Communication Roads sanctioned under "50 miles roads in every taluk scheme" for Buntwal Taluk ;

(*b*) the amount sanctioned for the said road works for the year 1973-74 ;

(*c*) the works completed, started but not completed and those yet to be started ;

(*d*) the amount spent for the said works in the current financial year ?

Sri H. M. CHANNABASAPPA (Minister for Public Works and Electricity) .—

(*a*) 17 works with length of 98.90 K. M. are included in the Integrated and Comprehensive Rural Communication Programme of Buntwal Taluk.

(*b*) Rs. 50,000.

(*c*) No works completed. Nine works started but not completed. Eight works are yet to be started.

(*d*) Rs. 77,404 up to 31st January 1974.

ಶ್ರೀ ಬಿ. ವಿ. ಕಕ್ಕಿಲಾಯ.—ಸ್ವಾಮಿ, ೧೯೭೪-೭೫ ನೇ ಸಾಲಿನಲ್ಲಾದರೂ ಈ ರಸ್ತೆಗಳನ್ನು ಪೂರ್ತಿ ಮಾಡುವುದಕ್ಕೆ ಸಾಕಷ್ಟು ಹಣವನ್ನು ಒದಗಿಸುತ್ತೀರಾ ?